ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಕ್ಷ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

URL.www.anekal-pa.in, web5.kar.nic.in/e-vinyasa

## ಮಾರ್ಪಡಿತ ಪ್ರಾರಂಭಿಕ ಪ್ರಮಾಣ ಪತ್ರ

(ನಮೂನೆ-3)

ಸಂಖ್ಯೆ: ಆಯೋಪ್ರಾ/ಎಲ್‌ಪಿ/65/2016-17 ದಿನಾಂಕ: 27 JUL 2017

**ವಿಷಯ:** ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.78/2, 78/3 ಮತ್ತು ಮರಸೂರು ಗ್ರಾಮದ ಸ.ನಂ.308, 309, 311/1ರಲ್ಲಿನ ಮತ್ತು ಅನುಮೋದಿತ ಬಡಾವಣೆಯ (ಬಿಎಂಆರ್‌ಡಿಎ/ಎಲ್‌ಪಿ/48/05-06 ದಿನಾಂಕ: 5.08.05ರಂದು ಅನುಮೋದನೆಯಾದ)ನಿವೇಶನ ಸಂಖ್ಯೆ:07ರಲ್ಲಿನ ವಿಸ್ತೀರ್ಣ ಸೇರಿ ಒಟ್ಟು 09ಎಕರೆ 29½ಗುಂಟೆ ಜಮೀನಿಗೆ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನೆ ನಕ್ಷೆಗೆ(Group Housing Development Plan)ಅನುಮೋದನೆ ನೀಡುವ ಸಂಬಂಧ.

**ಉಲ್ಲೇಖ:** 1)ಮೆ.ಸಿಪಾನಿ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಶ್ರೀ ದಿನೇಶ್ ಸಿಪಾನಿ ಇವರ ಅರ್ಜಿ ದಿನಾಂಕ:02.03.2017.

2) ದಿನಾಂಕ:11.04.2017ರಂದು ನಡೆದ ಪ್ರಾಧಿಕಾರದ 60ನೇ ಸಭೆಯ ವಿಷಯ ಸಂಖ್ಯೆ:42ರ ತೀರ್ಮಾನ.

3) ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ
ಈ ಹಿಂದೆ ದಿನಾಂಕ:19.10.2016 ಡಿ.ಡಿ.ನಂ.048171 ರೂ.8,01,000/-
ಹಾಗೂ ಕೆರೆಗಳಲ್ಲಿ ನೀರು ಸಂರಕ್ಷಣೆ ಸಂಬಂಧ ಡಿ.ಡಿ. ನಂ.048172
ರೂ.9,76,250/-(ರಶೀತಿ ಸಂಖ್ಯೆ:1133368,1133134 ದಿನಾಂಕ:24.10.2016)
ಮತ್ತು ದಿನಾಂಕ:03.07.2017 ಡಿ.ಡಿ. ನಂ.051314 ರೂ.12,000/-,ಕೆರೆಗಳಲ್ಲಿ ನೀರು
ಸಂರಕ್ಷಣೆ ಸಂಬಂಧ ಡಿ.ಡಿ. ನಂ.051313 ರೂ.10,000/-(ರಶೀತಿ ಸಂಖ್ಯೆ: 1133814,
1133174 ದಿನಾಂಕ:03.07.2017)

4) ಅರ್ಜಿದಾರರ ಪರಿತ್ಯಾಜನ ಪತ್ರ ದಿನಾಂಕ:24.07.2017.

5) ಈ ಕಛೇರಿಯ ಸಮಸಂಖ್ಯೆ ಪ್ರಾರಂಭಿಕ ಪ್ರಮಾಣ ಪತ್ರ ದಿನಾಂಕ:10.02.2017.

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಂತೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.78/2, 78/3 ಮತ್ತು ಮರಸೂರು ಗ್ರಾಮದ ಸ.ನಂ.308, 309, 311/1ರಲ್ಲಿನ ಮತ್ತು ಅನುಮೋದಿತ ಬಡಾವಣೆಯ(ಬಿಎಂಆರ್‌ಡಿಎ/ಎಲ್‌ಪಿ/48/2005-06 ದಿನಾಂಕ:5.08.2005ರಂದು ಅನುಮೋದನೆಯಾದ)ನಿವೇಶನ ಸಂಖ್ಯೆ:07ರಲ್ಲಿನ ವಿಸ್ತೀರ್ಣ ಸೇರಿ ಒಟ್ಟು 09ಎಕರೆ 29½ಗುಂಟೆ ಜಮೀನಿಗೆ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಕೋರಿ ಸಲ್ಲಿಸಿದ ಪ್ರಸ್ತಾವನೆಯನ್ನು ಉಲ್ಲೇಖ(2)ರಂತೆ ನಡೆದ ಆನೇಕಲ್ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿ ಸಭೆಯಲ್ಲಿ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಗಿರುತ್ತದೆ. ಹಾಗೂ ಈಗಾಗಲೇ ಸದರಿ ಪ್ರಕರಣದಲ್ಲಿ ಉಲ್ಲೇಖ(3)ರಂತೆ ಸಂಬಂಧಿತ ಶುಲ್ಕವನ್ನು ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಪಾವತಿಸಲಾಗಿದೆ. ಉಲ್ಲೇಖ(4)ರಂತೆ ಉದ್ಯಾನವನ ಮತ್ತು ರಸ್ತೆ ಪ್ರದೇಶವನ್ನು ಪ್ರಾಧಿಕಾರಕ್ಕೆ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುತ್ತದೆ.

ಮು.ಪು.ನೋ.

Housiey.com

ಉಲ್ಲೇಖ(5)ರಂತೆ ಈಗಾಗಲೇ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರ ರದ್ದುಪಡಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17ರಡಿಯಲ್ಲಿ **ಮೆ.ಸಿಪಾನಿ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಶ್ರೀದಿನೇಶ್ ಸಿಪಾನಿ,** ಇವರಿಗೆ ಮಾರ್ಪಡಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ(Group Housing)ಈ ಕೆಳಕಂಡ ನಿಬಂಧನೆಗಳೊಡನೆ ಅನುಮೋದಿಸಲಾಗಿದೆ.

1) ಮೇಲ್ಕಂಡ ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆಯಲ್ಲಿನ ಬ್ಲಾಕ್‌ಗಳಲ್ಲಿ ಕಟ್ಟಡ ಕಟ್ಟುವ ಮುನ್ನ ನಕ್ಷೆಯನ್ನು ಈ ಕಛೇರಿಯಿಂದ ನಿಯಮಗಳ ಪ್ರಕಾರ ಅನುಮೋದನೆ ಪಡೆದು ನಂತರ ಚಂದಾಪುರ ಮತ್ತು ಮರಸೂರು ಗ್ರಾಮ ಪಂಚಾಯ್ತಿಯಿಂದ ಕಟ್ಟಡ ಪರವಾನಿಗೆ ಪಡೆದು ನಂತರ ಕಟ್ಟಡದ ಕೆಲಸವನ್ನು ಪ್ರಾರಂಭಿಸುವುದು.

2) **ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಬೇಕಾದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ಪರವಾನಿಗೆ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.** ಹಾಗೂ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ.

3) ಈಗ ನೀಡಿರುವ ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಕಟ್ಟಲು ಪ್ರಾಧಿಕಾರ -ದಿಂದ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವುದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಕಟ್ಟಡ ಕಟ್ಟಲು ಸಾಧ್ಯವಾಗದಿದ್ದಲ್ಲಿ ಅನುಮತಿಯನ್ನು ಕಾಲಮಿತಿಯೊಳಗೆ ಸೂಕ್ತ ಕಾರಣಗಳನ್ನು ನೀಡಿ ನವೀಕರಿಸಿಕೊಳ್ಳತಕ್ಕದ್ದು.

4) ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ ಅಂದರೆ ಉದ್ಯಾನವನಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ ಅಭಿವೃದ್ಧಿಪಡಿಸತಕ್ಕದ್ದು.

5) ಪ್ರಸ್ತಾವಿತ ಮಾರ್ಪಡಿತ ವಸತಿ ಸಮುಚ್ಛಯ ಪ್ರದೇಶದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್‌ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳಿಗೆ ಒಳಪಟ್ಟಿರಬೇಕು ಹಾಗೂ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪ್ರಾಧಿಕಾರದಿಂದ ಪಡೆಯುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ ಅವಶ್ಯವಾಗಿ ನಿರಾಕ್ಷೇಪಣಾ ಪತ್ರ ಪಡೆಯತಕ್ಕದ್ದು.

6) ಮಾರ್ಪಡಿತ ವಸತಿ ಸಮುಚ್ಛಯ ನಕ್ಷೆ ಕಾರ್ಯಗತಗೊಳಿಸುವ ಮೊದಲು ಕರ್ನಾಟಕ ಗ್ರಾಮ ಪಂಚಾಯಿತಿ ಕಾಯ್ದೆಯಡಿ ಚಂದಾಪುರ ಮತ್ತು ಮರಸೂರು ಗ್ರಾಮಪಂಚಾಯ್ತಿಯಿಂದ ಪರವಾನಗಿ ಪಡೆಯತಕ್ಕದ್ದು.

7) ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೇ ಮಾರ್ಪಡಿತ ವಸತಿ ಅಭಿವೃದ್ಧಿ ನಕ್ಷೆಗೆ ಯಾವುದೇ ಬದಲಾವಣೆಯನ್ನು ಮಾಡಬಾರದು.

8) ನಿವೇಶನದ ಆವರಣದೊಳಗೆ ಮಳೆಯ ನೀರನ್ನು ಸಂರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

9) ಅನುಮೋದಿತ ಮಾರ್ಪಡಿತ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು, ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸುವುದು.

10) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.

11) ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

12) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.

ಪು.ತಿ.ನೋ.

13) ಮಾರ್ಪಡಿತ ವಸತಿ ಸಮುಚ್ಚಯ ನಕ್ಷೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಸಮೂಹ ವಸತಿ ನಕ್ಷೆಗೆ ನೀಡಿರುವ ಅಂಗೀಕಾರ ತಂತಾನೆ ರದ್ದುಗೊಳ್ಳುತ್ತದೆ.

14) ಈ ಮಾರ್ಪಡಿತ ವಸತಿ ಸಮುಚ್ಚಯ ನಕ್ಷೆಯಲ್ಲಿ ಬರುವ ಕಟ್ಟಡಗಳ ಮಾರಾಟ ಸಂಬಂಧ ನೀಡುವ ವಿವರದಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

15) ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (paved foot path) ನಿರ್ಮಿಸುವುದು.

16) ಅನುಮೋದಿತ ಮಾರ್ಪಡಿತ ವಸತಿ ಅಭಿವೃದ್ಧಿ ನಕ್ಷೆಗೆ ಮಳೆ ನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

17) ಪ್ರಸ್ತಾವಿತ ಪ್ರದೇಶದಲ್ಲಿ ಸೂಕ್ತವಾದ ಕಸ ಘನತ್ಯಾಜ್ಯ ನಿರ್ವಹಣೆಗಾಗಿ ಜಾಗವನ್ನು ಕಾಯ್ದಿರಿಸತಕ್ಕದ್ದು.

18) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ಪಾಲಿಸತಕ್ಕದ್ದು.

19) ಮಾರ್ಪಡಿತ ವಸತಿ ಸಮುಚ್ಚಯ ಯೋಜನಾ ಪ್ರದೇಶದಲ್ಲಿ ರಸ್ತೆಗಳ ಬದಿಯಲ್ಲಿ ಗಿಡಮರಗಳನ್ನು ನೆಡತಕ್ಕದ್ದು.

20) ಈ ಹಿಂದೆ ಪ್ರಾಧಿಕಾರದಿಂದ ಪತ್ರ ಸಂಖ್ಯೆ:ಆನೇಯೋಪ್ರಾ/ಎಲ್‌ಎಓ/65/2016-17 ದಿನಾಂಕ:10.02.2017ರಲ್ಲಿ ಅನುಮೋದಿಸಿದ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ವಸತಿ ಅಭಿವೃದ್ಧಿಯೋಜನಾ ನಕ್ಷೆಯನ್ನು ರದ್ದುಪಡಿಸಲಾಗಿದೆ.

21) ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅಧಿಕಾರ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

22) ಪ್ರಸ್ತಾವಿತ ಪ್ರದೇಶದಲ್ಲಿ ವಿಕಲಚೇತನರಿಗೆ ಅನುಕೂಲವಾಗುವಂತೆ ರಸ್ತೆಯನ್ನು ಕಡ್ಡಾಯವಾಗಿ ಅಭಿವೃದ್ಧಿಪಡಿಸ -ತಕ್ಕದು.

23) ಇತರ ಸಾಮಾನ್ಯ ಷರತ್ತುಗಳು.

27/07/17

ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,

**ಮೆ.ಸಿಪಾನಿ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್**
**ಪರವಾಗಿ ಶ್ರೀ ದಿನೇಶ್ ಸಿಪಾನಿ,**
ನಂ.824, 20ನೇ 'ಎ' ಮೈನ್,
8ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು-560 095.